## <u>ಹುತಾತ್ಮ ಯೋಧರ ಅವಲಂಭಿತರಿಗೆ ಉಚಿತ ಬಸ್ ಪಾಸ್ ಯೋಜನೆ</u>:

ರಾಷ್ಟ್ರ ರಕ್ಷಣೆಯಲ್ಲಿ ಧೀಮಂತ ಕರ್ತವ್ಯ ನಿರ್ವಹಣೆಯಲ್ಲಿ ತೊಡಗಿಸಿಕೊಂಡು ವೀರಮರಣವನ್ನಪ್ಪಿದ ರಾಜ್ಯದಲ್ಲಿನ ಹುತಾತ್ಮ ಯೋಧರ ಧೀರೋದಾತ್ತ ಸೇವೆಯನ್ನು ಸ್ಮರಿಸಿ ಅವರ ಕುಟುಂಬ ವರ್ಗದವರ (ತಂದೆ, ತಾಯಿ,ಪತ್ನಿ ಮತ್ತು ಅವಲಂಬಿತ ಮಕ್ಕಳಿಗೆ ) ಜೀವನ ನಿರ್ವಹಣೆಗೆ ಸಹಕರಿಸುವ ನಿಟ್ಟಿನಲ್ಲಿ ಈ.ಕ.ರ.ಸಾ.ಸಂಸ್ಥೆಯು ತನ್ನ ಸಾಮಾಜಿಕ ಹೊಣೆಗಾರಿಕೆಯಡಿಯಲ್ಲಿ ಹುತಾತ್ಮರಾದ ಯೋಧರ ಕುಟುಂಬದವರಿಗೆ 10 ವರ್ಷದ ವರೆಗೆ ಅಂದರೆ ಜುಲೈ-2012 ರಿಂದ ಜುಲೈ-2022 ರವರೆಗೆ ಮಾತ್ರ ಉಚಿತ ಬಸ್ ಪಾಸ್ ವಿತರಿಸಲು ನಿರ್ಧರಿಸಲಾಗಿರುತ್ತದೆ. ಈ.ಕ.ರ.ಸಾ.ಸಂಸ್ಥೆಯ ಸಾಮಾನ್ಯ/ ವೇಗದೂತ ಬಸ್ಸುಗಳಲ್ಲಿ ಮಾತ್ರ ಕರ್ನಾಟಕ ರಾಜ್ಯದೊಳಗೆ ಉಚಿತವಾಗಿ ಪ್ರಯಾಣಿಸುವುದಕ್ಕೆ ಅನುಮತಿಸಲಾಗಿದೆ. ಅನುಗುಣವಾಗಿ ಈ ಮೇಲೆ ತಿಳಿಸಿದ ಹುತಾತ್ಮರಾದ ಯೋಧರ ಕುಟುಂಬದವರಿಗೆ ಅಂದರೆ ತಂದೆ. ತಾಯಿ, ಪತ್ನಿ ಹಾಗೂ ಅವಲಂಬಿತ ಮಕ್ಕಳಿಗೆ ಉಚಿತ ಬಸ್‌ಪಾಸ್ ನೀಡಲು ಅವಕಾಶ ಕಲ್ಪಿಸಲಾಗಿದೆ.